d) ಪ್ರಥಮ ದರ್ಜೆ ರಾಜಸ್ವ ನಿರೀಕ್ಷಿಕರು – 20

e) ದ್ವಿತೀಯ ದರ್ಜೆ ಸಹಾಯಕರು – 8

f) ಬೆರಳಚ್ಚುಗಾರರು – 4

g) 'ಡಿ' ದರ್ಜೆ ನೌಕರರು – 20

h) ವಾಹನ ಚಾಲಕರು – 4

ಊ) a) ಬಾಡಿಗೆ ನಿಯಂತ್ರಣಾಧಿಕಾರಿಗಳ ಕಛೇರಿ ಪೂರ್ವ ವಲಯ – 79

b) ಬಾಡಿಗೆ ನಿಯಂತ್ರಣಾಧಿಕಾರಿಗಳ ಕಛೇರಿ ದಕ್ಷಿಣ ವಲಯ – 92

c) ಬಾಡಿಗೆ ನಿಯಂತ್ರಣಾಧಿಕಾರಿಗಳ ಕಛೇರಿ ಉತ್ತರ ವಲಯ – 69

d) ಬಾಡಿಗೆ ನಿಯಂತ್ರಣಾಧಿಕಾರಿಗಳ ಕಛೇರಿ ಪಶ್ಚಿಮ ವಲಯ – 44

ಋ) a) ಬಾಡಿಗೆ ನಿಯಂತ್ರಣಾಧಿಕಾರಿಗಳ ಕಛೇರಿ ಪೂರ್ವ ವಲಯ – 29

b) ಬಾಡಿಗೆ ನಿಯಂತ್ರಣಾಧಿಕಾರಿಗಳ ಕಛೇರಿ ದಕ್ಷಿಣ ವಲಯ – 24

c) ಬಾಡಿಗೆ ನಿಯಂತ್ರಣಾಧಿಕಾರಿಗಳ ಕಛೇರಿ ಉತ್ತರ ವಲಯ –

d) ಬಾಡಿಗೆ ನಿಯಂತ್ರಣಾಧಿಕಾರಿಗಳ ಕಛೇರಿ ಪಶ್ಚಿಮ ವಲಯ –

ಋೂ) ಬಾಡಿಗೆ ನಿಯಂತ್ರಣ ಮಂಡಳಿಗಳ ಮುಂದೆ ಬರುವ ಮೂಲಭೂತ ಸೌಕರ್ಯಗಳಾದ ನೀರು, ವಿದ್ಯುತ್, ಒಳಚರಂಡಿ ಸಂಪರ್ಕಗಳ ಬಗ್ಗೆ ಬಂದ ದೂರು ಅರ್ಜಿಗಳನ್ನು ಸ್ವೀಕರಿಸಿ, ಬಂದಂತಹ ಮನವಿಗಳನ್ನು ರಾಜಸ್ವ ನಿರೀಕ್ಷಕರ ಸಹಯೋಗದೊಂದಿಗೆ ಸ್ಥಳ ತನಿಖೆ ನಡೆಸಿ, ವಿಚಾರಣೆ ನಡೆಸಿ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸಲಾಗುತ್ತಿದೆ.

1331 (2039) ಶ್ರೀ ಹಾಲಪ್ಪ ಹೆಚ್. (ಹೊಸನಗರ) :– ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾಮಾಜಿಕ ಅರಣ್ಯ ನೆಡುತೋಪುಗಳಲ್ಲಿ ಏಕಜಾತಿಯ ಸಸ್ಯಗಳನ್ನು ಬೆಳೆಸುವುದು ಮಲೆನಾಡು ಪ್ರದೇಶದಲ್ಲಿ ಸೂಕ್ತವೇ;

ಆ) ಸ್ಥಳೀಯ ಮಿಶ್ರಜಾತಿಯ (ಎಲ್ಲಾ ಜಾತಿಯ) ಸಸ್ಯಗಳನ್ನು ಬೆಳೆಸದಿರಲು ಕಾರಣಗಳೇನು;

ಇ) ಮಿಶ್ರ ಜಾತಿಯ ಮರಗಳನ್ನು ಬೆಳೆಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಸಿ.ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಸೂಕ್ತವಾಗಿರುವುದಿಲ್ಲ.

ಆ) ಸ್ಥಳೀಯ ಪರಿಸರಕ್ಕೆ ಹಾಗೂ ಜನರ ಅವಶ್ಯಕತೆ ಪೂರೈಸುವ ವಿವಿಧ ಜಾತಿಯ ಗಿಡ ಮರಗಳನ್ನು ಬೆಳೆಸಲಾಗುತ್ತಿದೆ.

ಇ) ಯೋಜನಾವಾರು ಅನುದಾನದಂತೆ ಮತ್ತೆ ಯೋಜನ ಮಾರ್ಗಸೂಚಿ ಪ್ರಕಾರ ಆಯಾ ಪ್ರದೇಶಗಳು ಹಾಗೂ ಪರಿಸರಕ್ಕೆ ಹೊಂದುವಂತಹ ಮರ ಗಿಡಗಳನ್ನು ಬೆಳೆಸಲಾಗುತ್ತಿದೆ.

1332 (2040) ಶ್ರೀ ಹಾಲಪ್ಪ ಹೆಚ್. (ಹೊಸನಗರ) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯ ಹೊಸನಗರ ಮತ್ತು ಶಿವಮೊಗ್ಗ ತಾಲ್ಲೂಕುಗಳಲ್ಲಿ ದರಖಾಸ್ತು ಭೂಮಿಯನ್ನು ಮಂಜೂರು ಮಾಡುವಂತೆ ಕೋರಿ ಬಂದಿರುವ ಅರ್ಜಿಗಳೆಷ್ಟು (ತಾಲ್ಲೂಕುವಾರು ವಿವರ ನೀಡುವುದು);

ಆ) ಈ ಅರ್ಜಿಗಳನ್ನು ವಿಲೇವಾರಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಕಳೆದ ನಾಲ್ಕು ವರ್ಷಗಳಿಂದ ಇಲ್ಲಿಯವರೆಗೆ ಮಂಜೂರಾದ ಜಮೀನಿನ ವಿಸ್ತೀರ್ಣ, ವ್ಯಕ್ತಿಗಳ ಮತ್ತು ಸಂಸ್ಥೆಗಳು ಯಾವುವು (ಪೂರ್ಣ ವಿವರ ನೀಡುವುದು)?